ಎಮ್.ವಿ.ಸಿ. 151/2022
ಫ್ರಾಸಾಃ 01

ದಿನಾಂಕಃ 28-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ</u>

ನಾನು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ.

1. ಪ್ರ.ವ.ವ. ದೃಢಿಕೃತ ನಕಲು ನಿಪಿ-1
2. ದೂರಿನ ದೃಢಿಕೃತ ನಕಲು ನಿಪಿ-2
3. ದೋಷಾರೋಪಣ ಪತ್ರದ ದೃಢಿಕೃತ ನಕಲು ನಿಪಿ-3
4. ಪಿಎಂ ವರದಿ ದೃಢಿಕೃತ ನಕಲು ನಿಪಿ-4
5. ಎಸ್‌ಸಿ ನಂ.368/2018 ರಲ್ಲಿಯ ವೈದ್ಯರ ನೀಡಿದ ಸಾಕ್ಷ್ಯದ ದೃಢಿಕೃತ ನಕಲು ನಿಪಿ-5
6. ಎಸ್‌ಸಿ ನಂ.368/2018 ರಲ್ಲಿ ಆದ ತೀರ್ಪಿನ ದೃಢಿಕೃತ ನಕಲು ನಿಪಿ-6
7. ನನ್ನ ಆಧಾರ ಕಾರ್ಡಿನ ನಿಪಿ-7
8. ನನ್ನ ಡಿಪೆಡೆಂಟ್ ಐಡಿ ಕಾರ್ಡ ನಿಪಿ-8
9. ನನ್ನ ಗಂಡನ ಆರ್ಮಿಯ ಐಡಿ ಕಾರ್ಡ ನಿಪಿ-9
10. ನನ್ನ ಗಂಡ ಮತ್ತು ಮಾವನ ಜಮೀನಿನ 4 ಆರಟಿಸಿಗಳು ನಿಪಿ-10 ರಿಂದ 13
11. ನನ್ನ ಗಂಡನ ಜೂನ-2017 ರ ವೇತನ ಸ್ಲಿಪು ನಿಪಿ-14
12. ನನ್ನ ಗಂಡನ ಮೇ-2017 ರ ವೇತನ ಸ್ಲಿಪು ನಿಪಿ-15

13. ನನ್ನ ಗಂಡನ ಜುಲೈ-2017 ರ ವೇತನ ಸ್ಲೀಪು ನಿಪಿ-16

14. ನನ್ನ ಗಂಡನ ವೇತನ ಬಿಲ್ಲನ್ನು ದಿನಾಂಕ 16.09.2022 ರಂದು ತೆಗೆದ ಬಗ್ಗೆ ಕೆ-2 ದಾಖಲೆ ನಿಪಿ-17

15. ನನ್ನ ಗಂಡನು ಮೃತ ಪಟ್ಟ ನಂತರ ಪೇನ್‌ಶನ್ ಡಿಟೈಲ ದಾಖಲೆ ನಿಪಿ-18

16. ವೈದ್ಯಾಧಿಕಾರಿ ನೀಡಿದ ಸೇವಾ ದೃಢಿಕರಣ ಪ್ರಮಾಣ ಪತ್ರ ನಿಪಿ-19

ಕಾರಣ, ಅರ್ಜಿಯಲ್ಲಿ ಕೇಳಿದಂತೆ ಪರಿಹಾರಕ್ಕೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೆನೆ.

<u>ಪಾಟೀ ಸವಾಲುಃ ಎದುರುದಾರ ಪರ ಮಾನ್ಯ ವಕೀಲರಿಂದಃ</u>

ಎದುರುದಾರರ ಪರ ಮಾನ್ಯ ವಕೀಲರು ಗೈರುಹಾಜರು ಇದ್ದ ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4 ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕಃ 28-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 2 ನೇ ಎದುರುದಾರ ಪರ ಮಾನ್ಯ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಈ ಕೇಸಿನಲ್ಲಿ ಪೊಲೀಸರಿಗೆ ನಾನೇ ದೂರು ಕೊಟ್ಟಿರುತ್ತೇನೆ. ಈ ಅಪಘಾತ ಸ್ಥ,ಳದ ಪಂಚನಾಮೆಯನ್ನಾಗಲೀ , ನಾಕಶೆಯನ್ನಾಗಲೀ ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ನಿಜ. ಅಪಘಾತವನ್ನು ನಾನು ಪ್ರತ್ಯೇಕ್ಷ ನೋಡಿರುವುದಿಲ್ಲ ಎಂದರೆ ನಿಜ. ಅಪಘಾತ ಸ್ಥಳವು ನನ್ನ ಮನೆಯಿಂದ 300 ಅಂತರದಲ್ಲಿ ಇತ್ತು ಎಂದರೆ ನಿಜ. ಈ ಅಪಘಾತ ಸ್ಥಳದಲ್ಲಿ ರಸ್ತೆಯು 20 ಅಡಿ ಅಗಲ ಇದ್ದು ನೇರವಾಗಿದೆ ಎಂದರೆ ನಿಜ. ಅನೀಲ ಅರ್ಜುನ ಈಟಿ ನನ್ನ ಗಂಡನ ಕಾಕನ ಮಗ. ಅನೀಲ ಅರ್ಜುನ ಈಟಿ ಈತನು ನನ್ನ ಗಂಡನು ಅಪಘಾತದಿಂದ ಮೃತ ಪಟ್ಟಿದ್ದು ಅಲ್ಲ ಆತನನ್ನು ಕೊಲೆ ಮಾಡಲು ವಾಹನ ಸಂಖ್ಯೆ ಕೆಎ-48/ಎಂ-0271 ವಾಹನವನ್ನು ಬಸಲಾಯಿತು ಎಂದು ಪೊಲೀಸರಿಗೆ ದೂರು ಕೊಟ್ಟನೆಂದರೆ ನಿಜ. ಆ ರೀತಿ ಪೊಲೀಸರಿಗೆ ಕೊಟ್ಟ ದೂರಿನಲ್ಲಿ ನನ್ನನ್ನು 2 ನೇ ಆರೋಪಿ ಎಂದು ತೋರಿಸಲಾಗಿದೆ ಎಂದರೆ ನಿಜ. ಚಾಲಕನನ್ನು ಆ ಕೊಲೆ ಕೇಸಿನಲ್ಲಿ 4 ನೇ ಆರೋಪಿ ಎಂದು ತೋರಿಸಲಾಗಿದೆ ಎಂದರೆ ನಿಜ. ಕ್ರೈಂ ನಂ.168/2018 ಕೇಸಿನಲ್ಲಿ ಆರೋಪಿತರಾದ ನಮ್ಮ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿದ್ದು ತಪ್ಪು ಎಂದು ಆ ದೋಷಾರೋಪಣಾ ಪತ್ರವನ್ನು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರದ್ದು ಪಡಿಸುವಂತೆ ಪಿಟಿಶನ್ ಸಲ್ಲಿಸಿರಲಿಲ್ಲ. ಮಹೇಶ ಹಜಾರಿ ಈತನ ಪರಿಚಯ ನಿಮಗೆ ಇದೆಯಾ ಎಂದರೆ ಸಾಕ್ಷಿ ಆತನ ಪರಿಚಯ ನನಗೆ ಇರಲಿಲ್ಲ ಎನ್ನುತ್ತಾರೆ. ಕ್ರೈಂ ನಂ.168/2018 ಪ್ರಕರಣದಲ್ಲಿ ಪೊಲೀಸರು ಕಲಂ 279 ಮತ್ತು 304 ಎ ಕಲಂಗಳಲ್ಲಿ ದೋಷಾರೋಪಣಾ ಪತ್ರ ಸಲ್ಲಿಸಿಲ್ಲ ಎಂದರೆ ನಿಜ. ಸದರಿ

ಪ್ರಕರಣದಲ್ಲಿ ಕಲಂ 302, 201, 120 ಬಿ ಸಹ ಕಲಂ 34 ಐಪಿಸಿ ರಡಿಯಲ್ಲಿ ದೋಷಾರೋಪಣಾ ಪತ್ರ ಸಲ್ಲಿಸಿದ್ದಾರೆ ಎಂದರೆ ನಿಜ. ನಾನು ಈ ಕೇಸಿನಲ್ಲಿ ಎದುರುದಾರರಿಂದ ಪರಿಹಾರದ ಹಣ ಪಡೆಯುವ ಉದ್ದೇಶದಿಂದ ನನ್ನ ಗಂಡನು ರಸ್ತೆ ಅಪಘಾತದಿಂದ ಆದ ಗಾಯಗಳಿಂದ ಮೃತ ಪಟ್ಟನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಟೆಂಪೋ ಟ್ರಾಕ್ಸ ಕ್ರುಜರ ನಂ.ಕೆಎ-48/ಎಂ-0271 ನ್ನು ನನ್ನ ಗಂಡನ ಕೊಲೆ ಮಾಡಲು ಉಪಯೋಗ ಮಾಡಿದ್ದರಿಂದ ಅಲ್ಲಿ ಯಾವುದೇ ಅಪಘಾತ ಆಗದೇ ಇದುದ್ದರಿಂದ 2 ನೇ ಎದುರುದಾರರು ಅರ್ಜಿದಾರರಾದ ನಮಗೆ ಯಾವುದೇ ಪರಿಹಾರದ ಹಣ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಅಪಘಾತದ ಸ್ಥಳದಲ್ಲೇ ಮೃತ ಪಟ್ಟಿಲ್ಲ. ನನ್ನ ಗಂಡನು ಚಿಕಿತ್ಸೆಯಲ್ಲಿದ್ದಾಗ ಕೆಎಲ್ಇ ಆಸ್ಪತ್ರೆಯಲ್ಲಿ ಮೃತ ಪಟ್ಟನು. ಅಪಘಾತದ ದಿನ ನನ್ನ ಗಂಡ ಹೇಲ್ಮೆಟ ಧರಿಸಿರಲಿಲ್ಲ ಎಂದರೆ ನಿಜ. ಅಪಘಾತ ಸಮಯದಲ್ಲಿ ನನ್ನ ಗಂಡ ಚಲಾಯಿಸುತ್ತಿದ್ದ ಮೋಟರ ಸೈಕಲ ನಂ.ಕೆಎ-23/ಎಫಜಿ 0658 ಇದು ರಮೇಶ ಹಂಜಿ ಇವರಿಗೆ ಸೇರಿದ್ದು. ಅಪಘಾತದ ದಿನ ನನ್ನ ಗಂಡ ಚಲಾಯಿಸುತ್ತಿದ್ದ ಮೋಟರ ಸೈಕಲಗೆ ಇನ್ಸುರನ್ಸ ಇತ್ತು. ಆ ಇನ್ಸುರನ್ಸ ಪ್ರತಿಯನ್ನು ನಿಮಗೆ ಹಾಜರು ಮಾಡಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ತೊಂದರೆ ಇಲ್ಲ ಎನ್ನುತ್ತಾರೆ. ನನ್ನ ಗಂಡನಿಗೆ ಮೋಟರ ಸೈಕಲ ಚಲಾಯಿಸಲು ಡಿಎಲ್ ಇತ್ತು. ಅದನ್ನು ನಿಮಗೆ ಹಾಜರು ಮಾಡಲು ತೊಂದರೆ ಇದೆಯಾ ಎಂದರೆ ತೊಂದರೆ ಇಲ್ಲ ಎನ್ನುತ್ತಾರೆ. ನನ್ನ ಗಂಡನ ಚಿಕಿತ್ಸೆಗೆ 1 ಲಕ್ಷ ರೂಪಾಯಿ ಖರ್ಚಾಯಿತು ಎಂದು ತೋರಿಸಲು ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ನಿಜ.

ನನ್ನ ಗಂಡನ ಜನ್ಮ ದಿನಾಂಕ 22.07.1976. ನಿಪಿ 18 ಪೆನಶನ್ ಡಿಟೈಲ್ಸ ದಾಖಲೆಯಲ್ಲಿ ತೋರಿಸಿದ ನನ್ನ ಜನ್ಮ ದಿನಾಂಕ ಸರಿಯಾಗಿದೆ. ಈ ಅಪಘಾತದ ದಿನ

ನನ್ನ ಗಂಡನಿಗೆ 41 ವರ್ಷ 10 ತಿಂಗಳು 10 ದಿವಸ ಪ್ರಾಯ ಆಗಿತ್ತು ಎಂದರೆ ನಿಜ. ನನ್ನ ಗಂಡನು ಮೃತ ಪಡುವ ಮೊದಲು ಆಸ್ಪತ್ರೆಯಲ್ಲಿ ಅಟೆಂಡರ ಎಂದು ಕೆಲಸ ಮಾಡುತ್ತಿದ್ದನು. ನನ್ನ ಗಂಡನು  ನಿವೃತ್ತ ಸೈನಿಕನಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಅಟೆಂಡರ ಎಂದು ಕೆಲಸ ಮಾಡುತ್ತಿದ್ದನೆಂದು ಮತ್ತು ಆತನು ಕೃಷಿಯಿಂದ ಹೀಗೆ ಒಟ್ಟು ತಿಂಗಳಿಗೆ 60 ಸಾವಿರ ಗಳಿಸತ್ತಿದ್ದನು ಎಂದು ತೋರಿಸುವ ದಾಖಲೆಗಳನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ನಿಜ. ಸಾಕ್ಷಿಯು ಮುಂದುವರೆದು ನನ್ನ ಗಂಡನ ವೇತನದ ದಾಖಲೆ, ಆರಟಿಸಿ ಮತ್ತು ಪೇನಶನ್ ಡಿಟ್ಟೆಲ್ಸ ಹಾಜರುವ ಮಾಡಿದ್ದೆನೆ ಎನ್ನುತ್ತಾರೆ. ನಿಪಿ 16 ಇದು 2017 ನೇ ಜುಲ್ಲೆ ತಿಂಗಳದ್ದು ಎಂದರೆ ನಿಜ. ನಿಪಿ 10 ರಿಂದ 13 ರಲ್ಲಿ ತೋರಿಸಿದ ಜಮೀನುಗಳು ನನ್ನ ಗಂಡನ ತಂದೆ ಮತ್ತು ಆತನ ಎಲ್ಲ ಮಕ್ಕಳಿಗೆ ಸೇರಿದ್ದು ಇದೆ ಎಂದರೆ ನಿಜ. ಸಾಕ್ಷಿಯು ಆ ಜಮೀನಗಳಲ್ಲಿ ನನ್ನ ಗಂಡನ ಪ್ರತ್ಯೇಕ ಜಮೀನುಗಳು ಇವೆ ಎನ್ನುತ್ತಾರೆ. ನನ್ನ ಗಂಡನಿಗೆ ಕೃಷಿಯಿಂದ ಎಷ್ಟು ಆದಾಯ ಇತ್ತು ಎಂದು ನಾನು ಅದರ ಆದಾಯ ಪ್ರತ್ಯೇಕ ಹೇಳಿಲ್ಲ ಎಂದರೆ ನಿಜ.

ನನ್ನ ಗಂಡನ ತಂದೆ ಮೃತ ಪಟ್ಟಿದ್ದಾರೆ ಆದರೆ ತಾಯಿ ಅನ್ನಪೂರ್ಣ ಶಂಕರ ಈಟಿ ಜೀವಂತ ಇದ್ದಾರೆ. ನನ್ನ ಗಂಡನ ತಾಯಿ ಪ್ರತ್ಯೇಕ ವಾಸವಾಗಿದ್ದಾರೆ. ನನ್ನ ಗಂಡನ ತಾಯಿಯನ್ನು ಈ ಕೇಸಿನಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ನಿಜ. ನಿಮಗೆ ನಿಮ್ಮ ಗಂಡನ ತಾಯಿಯನ್ನು ಈ ಕೇಸಿನಲ್ಲಿ ಪಾಟೀ ಮಾಡಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಅವರು 2007 ನೇ ಇಸವಿಯಿಂದಲೂ ಪ್ರತ್ಯೇಕ ವಾಸವಾಗಿದ್ದಾರೆ ಅವರು ನಮ್ಮ ಜೊತೆ ಮಾತನಾಡದಿರುವುದರಿಂದ ಪಾಟೀ ಮಾಡಿಲ್ಲ ಎನ್ನುತ್ತಾರೆ. ನನ್ನ ಗಂಡನ ತಾಯಿಯನ್ನು ಈ ಕೇಸಿನಲ್ಲಿ ಪಾಟೀ ಮಾಡದೇ ಇದುದ್ದರಿಂದ ಈ ಕೇಸು ಉರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಈ ಅಪಘಾತಕ್ಕೆ ಸಂಬಂಧ ಪಟ್ಟಂತೆ ನನ್ನ ಗಂಡನ ತಾಯಿ ಪರಿಹಾರ ಕೋರಿ ಯಾವುದಾದರು ಕೇಸು ಹಾಕಿದ್ದಾರೆ ಎಂದು ನನಗೆ

ಗೊತ್ತಿಲ್ಲ. 2 ನೇ ಎದುರುದಾರರಿಂದ ಹೇಗಾದರು ಪರಿಹಾರದ ಹಣ ಪಡೆಯುವ ಉದ್ದೇಶದಿಂದ ನನ್ನ ಗಂಡ ಅಪಘಾತದಲ್ಲಿ ಮೃತ ಪಟ್ಟನೆಂದು ಸುಳ್ಳು ದೂರು ಕೊಟ್ಟು ಸುಳ್ಳು ಕೇಸ ಹಾಕಿದ್ದೆನೆಂದರೆ ಸರಿಯಲ್ಲ. ನಾನು ಕೆಎಲ್ಇಯಲ್ಲಿ ಸುಪರ ವಾಯ್ಸರ ಎಂದು ಕೆಲಸ ಮಾಡುತ್ತೇನೆ. ನನಗೆ ಕೆಎಲ್ಇಯಲ್ಲಿ ಈಗ ಸುಪರ ವಾಯ್ಸರ ಎಂದು ಕೆಲಸ ಮಾಡುವುದರಿಂದ ತಿಂಗಳಿಗೆ 7500/-ಸಂಬಂಳ ಕೊಡುತ್ತಾರೆ.ನಾನು ನನ್ನ ಗಂಡನ ಆದಾಯವನ್ನು ಅವಲಂಬಿತವಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ತಾಯಿ ಮಾತ್ರ ನನ್ನ ಗಂಡನ ಆದಾಯವನ್ನು ಅವಲಂಬಿತವಾಗಿದ್ದಾಳೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4 ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕಃ 05-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

1. ತನಿಖಾಧಿಕಾರಿಗಳಾದ ಆರಕ್ಷಕ ವೃತ್ತ ನೀರಿಕ್ಷಕರು ನ್ಯಾಯಾಲಯಕ್ಕೆ ಕೊಟ್ಟ ಮನವಿ ಪತ್ರದ ದೃಢಿಕೃತ ನಕಲು ನಿಪಿ-20
2. ಅಪಘಾತ ಸ್ಥಳದ ಪಂಚನಾಮೆಯ ದೃಢಿಕೃತ ನಕಲು ನಿಪಿ-21
3. ಅಪಘಾತ ಸ್ಥಳದ ನಕಾಶೆ ದೃಢಿಕೃತ ನಕಲು ಮತ್ತು ಅದೇ ದಾಖಲೆಯ ಇನ್ನೊಂದು ಪುಟದಲ್ಲಿರುವ ಪಂಚನಾಮೆಯ ಫೋಟೋವಿನ ದೃಢಿಕೃತ ನಕಲು ನಿಪಿ-22 (ಒಂದೇ ಹಾಳೆಯಲ್ಲಿದೆ)
4. ನನ್ನ ಗಂಡ ಅಪಘಾತ ಸಮಯದಲ್ಲಿ ಚಲಾಯಿಸುತ್ತಿದ್ದ ಸ್ಕೂಟಿಯ ಇನ್ಸುರನ್ಸ ಪಾಲಿಸಿಯ ಪ್ರತಿ ನಿಪಿ-23.
5. ನನ್ನ ಗಂಡನ ಡಿಎಲ್‌ನ ಸ್ಮಾರ್ಟ ಕಾರ್ಡ ನಿಪಿ-24

ಪಾಟೀ ಸವಾಲುಃ **2** ನೇ ಎದುರುದಾರ ಪರ ಮಾನ್ಯ ವಕೀಲರಿಂದಃ

ನಿಪಿ 20 ರ ಪ್ರಕಾರ ಪೊಲೀಸ ಇನ್ಸಪೆಕ್ಟರವರು ನ್ಯಾಯಾಲಯಕ್ಕೆ ಐಪಿಸಿ ಕಲಂ 279,304(ಎ) ಮತ್ತು ಮೋಟರ ವಾಹನ ಕಾಯ್ದೆ ಕಲಂ 134 ಸಹ ಕಲಂ 187 ಈ ಕಲಂಗಳನ್ನು ಕಡಿಮೆ ಮಾಡಿ ಐಪಿಸಿ ಕಲಂ 302, 201, 120(ಬಿ) ಸಹ ಕಲಂ 34 ನ್ನು ಅಳವಡಿಸಿಕೊಳ್ಳುವಂತೆ ಮನವಿಕೊಟ್ಟ ಕಾರಣ ನ್ಯಾಯಾಲಯವು ಐಪಿಸಿ ಕಲಂ 302, 201, 120(ಬಿ) ಸಹ ಕಲಂ 34 ಕಲಂಗಳನ್ನು ಅಳವಡಿಸಿಕೊಳ್ಳಲು ಅನುಮತಿ ನೀಡಿತು ಎಂದರೆ ನಿಜ. ನಿಪಿ 20 ದಾಖಲೆ ಸರಿಯಾಗಿದೆಯೋ ತಪ್ಪಾಗಿದೆಯಾ ಎಂದರೆ ಅದು ತಪ್ಪು ಇದೆ ಎನ್ನುತ್ತಾರೆ. ಪೊಲೀಸರು ಈ

ಪ್ರಕರಣದಲ್ಲಿತನಿಖೆ ಮಾಡಿ ಕಲಂ 302, 201, 120(ಬಿ) ಸಹ ಕಲಂ 34 ಐಪಿಸಿಕಲಂಗಳಿಗೆ ದೋಷಾರೋಪಣಾ ಪತ್ರ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ದೋಷಾರೋಪಣಾ ಪತ್ರ ಸಲ್ಲಿಸಿದ್ದು ನಿಜ ಆದರೆ ಆ ರೀತಿ ಸಲ್ಲಿಸಿದ ದೋಷಾರೋಪಣಾ ಪತ್ರ ಸುಳ್ಳು ಇರುತ್ತದೆ ಎನ್ನುತ್ತಾರೆ. ಆ ಕೇಸಿನಲ್ಲಿ ನನ್ನನ್ನು ಸಹ ಆರೋಪಿಯನ್ನಾಗಿ ಮಾಡಲಾಗಿತ್ತು ಎಂದರೆ ನಿಜ. ತನಿಖಾಧಿಕಾರಿಗಳು ಸಲ್ಲಿಸಿದ ದೋಷಾರೋಪಣಾ ಪತ್ರ ತಪ್ಪು ಇದೆ ಎಂದು ನಾನು ಕರ್ನಾಟಕ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆ ದೋಷಾರೋಪಣಾ ಪತ್ರವನ್ನು ಪ್ರಶ್ನೀಸಿಲ್ಲ ಎಂದರೆ ನಿಜ. ನನ್ನ ಗಂಡ ಚಲಾಯಿಸುತ್ತಿದ್ದ ಸ್ಕೂಟಿ ರಮೇಶ ಹಂಜಿ ಇವರಿಗೆ ಸೇರಿದು ಎಂದರೆ ನಿಜ. ಸಾಕ್ಷಿಯು ಮುಂದುವರೆದು ಅವರು ನನ್ನ ಅಣ್ಣ ಎನ್ನುತ್ತಾರೆ. ನಿಪಿ 24 ಡಿಎಲ್ ನಲ್ಲಿರುವ ಸಂಗತಿಗಳು ಸರಿ ಇದೆ ಎಂದರ ಸರಿ ಇದೆ ಎನ್ನುತ್ತಾರೆ. ನಿಪಿ 24 ರಲ್ಲಿ ನಮೂದಿಸಿದ ನನ್ನ ಗಂಡನ ಜನ್ಮ ದಿನಾಂಕ 22.07.1976 ಇದು ಸರಿ ಇರುತ್ತದೆ.

1 ನೇ ಎದುರುದಾರ ಪರ ಮಾನ್ಯ ವಕೀಲರು ಗೈರುಹಾಜರು ಇದುದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4 ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.